ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಬಂದಿದೆ.

(ಅ) ಪೂರ್ಣವಾಗಿ ನಾಶ ಹೊಂದಿರುವ ಮನೆಗಳ ಸಂಖ್ಯೆ — ೯

(ಆ) ಭಾಗಶಃ ನಷ್ಟ ಹೊಂದಿರುವ ಮನೆಗಳ ಸಂಖ್ಯೆ — ೧೧೪೮

ಆ) ೫೦,೦೦೦-೦೦ ರೂ ಗಳ ಬಿಡುಗಡೆ ಆಗಿದೆ

ನಿರ್ದೇಶನಾಲಯದ ಭಾಷಾಂತರಕಾರರ ಸಂಘ ಸಲ್ಲಿಸಿರುವ ಬೇಡಿಕೆಗಳ ಬಗ್ಗೆ

೪೦೪೩. ಶ್ರೀ ಎಂ. ಎಸ್. ಕೃಷ್ಣನ್ (ಎಂ.ಎಲ್.ಎ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿರ್ದೇಶನಾಲಯದ ಭಾಷಾಂತರಕಾರರ ಸಂಘ ಸಲ್ಲಿಸಲಾಗಿರುವ ಬೇಡಿಕೆಗಳಾವುವು, ಅವುಗಳನ್ನು ಈಡೇರಿಸದಿರಲು ಕಾರಣವೇನು ?

ಆ) ಮಾನ್ಯ ಕಾನೂನು ಸಚಿವರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯು ಸರ್ಕಾರದ ಕಾರ್ಯದರ್ಶಿ ಮುಂತಾದವರು ಸ್ಥಳಪರಿಶೀಲನೆಯೇನಾದ್ದಾದರೂ ಕೈಕೊಂಡಿದ್ದಾರೆಯೇ ಹಾಗಿದ್ದಲ್ಲಿ ಸ್ಥಳ ಪರಿಶೀಲನೆಯ ನಂತರ ಕೈಗೊಂಡಿರುವ ಕ್ರಮಗಳಾವುವು ?

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರು).—

ಅ) ನೀರು ಪೂರೈಕೆಗೆ ಸಂಬಂಧಿಸಿದ ವಿಷಯವೇ ಮುಖ್ಯ ಬೇಡಿಕೆ. ಈ ಸಂಬಂಧದಲ್ಲಿ ಅವಶ್ಯಕ ಕ್ರಮವಹಿಸಿ ಕೈಗೊಳ್ಳಲಾಗಿದೆ.

ಆ) ದಿನಾಂಕ ೧೧-೫-೮೮ ರಂದು ಸರ್ಕಾರದ ಕಾರ್ಯದರ್ಶಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಇವರು ಮತ್ತು ಇತರ ಇಬ್ಬರು ಅಧಿಕಾರಿಗಳು,ಭಾಷಾಂತರ ಇಲಾಖೆಗೆ ನೀರಿನ ಸಂಬಂಧದಲ್ಲಿ ಇರುವ ಸಮಸ್ಯೆಯನ್ನು ತಾವೇ ಖುದ್ದಾಗಿ ನೋಡಲು ಭಾಷಾಂತರ ಇಲಾಖೆಗೆ ಭೇಟಿ ನೀಡಿದ್ದರು. ಭಾಷಾಂತರ ನಿರ್ದೇಶಕರಿಗೆ ನೀರಿನ ಸಮಸ್ಯೆಯನ್ನು ಆದಷ್ಟು ಶೀಘ್ರದಲ್ಲಿ ಪರಿಹರಿಸಲು ಕ್ರಮಕೈಗೊಳ್ಳಲು ಸೂಚನೆಯನ್ನು ನೀಡಿದರು. ನೀರಿನ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸಹಾಯ ನೀಡಬೇಕೆಂದು ಕಟ್ಟಡದ ಮಾಲೀಕರನ್ನು ಕೋರಿಕೊಳ್ಳಲಾಯಿತು.

ಅವರ ಕಾರ್ಯದರ್ಶಿ (ವ್ಯಾಜ್ಯ ೧೧) ಇವರು ವಾದೇಕ್ಷಕರೊಂದಿಗೆ ದಿನಾಂಕ ೧೪-೬-೮೮ರಂದು ಭಾಷಾಂತರ ನಿರ್ದೇಶನಾಲಯಕ್ಕೆ ಭೇಟಿ ನೀಡಿದ್ದರು. ಅವರು ತಮ್ಮ ವರದಿಯಲ್ಲಿ ಭಾಷಾಂತರ ನಿರ್ದೇಶನಾಲಯದಲ್ಲಿ ಕುಡಿಯುವ ನೀರಿಗಾಗಲಿ ಅಥವಾ ಶೌಚಾಲಯಕ್ಕೆ ಬಳಸುವ ನೀರಿಗಾಗಲಿ ಯಾವುದೇ ತೊಂದರೆಯಿಲ್ಲವೆಂದು ಹೇಳಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ

೪೦೦೫. ಶ್ರೀ ಬಿ. ಉಮರಬ್ಬ (ವಿಟ್ಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ ರಿಂದ ಈಚೆಗೆ ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳನ್ನು ತೆರೆಯುವ ಅಥವಾ ಅಭಿವೃದ್ಧಿ ಪಡಿಸುವ ಯೋಜನೆಗಳಿವೆಯೇ ?

ಆ) ಈಪೈಕಿ ಕಾರ್ಯಗತಗೊಳಿಸಲಾಗಿರುವುದು ಎಷ್ಟು ? ಹಾಗೂ ಬಾಕಿ ಉಳಿದಿರುವುದು

ಇ) ಎಷ್ಟು ಅವಧಿಯೊಳಗೆ ಅವುಗಳನ್ನು ಕಾರ್ಯಗತಗೊಳಿಸಲಾಗುವುದು ?

ಈ) ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳ ಜಿಲ್ಲಾವಾರು ವಿವರಗಳನ್ನು ನೀಡುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಏನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ೧೫೬ ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆ.

ಆ) ೩೧-೮-೧೯೮೮ರ ಅಂತ್ಯದಲ್ಲಿ ಕಾರ್ಯಗತಗೊಳಿಸಿರುವುದು ೧೨೬ ಬಾಕಿ ಉಳಿದಿರುವುದು ೩೦

ಇ) ಏನೇ ಯೋಜನೆಯ ಅಂತ್ಯದೊಳಗೆ ಕಾರ್ಯಗತಗೊಳಿಸಲು ಪ್ರಯತ್ನಿಸಲಾಗುವುದು.

ಈ) ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಪ್ರಾಥಮಿಕ ಆರೋಗ್ಯ ಕೇಂದ್ರ	ಪ್ರಾಥಮಿಕ ಆರೋಗ್ಯ ಘಟಕ
೧	೨	೩	೪
೧	ಬೆಂಗಳೂರು ನಗರ	೧೦	೫೪
೨	ಬೆಂಗಳೂರು ಗ್ರಾಮಾಂತರ	೨೪	೫೦
೩	ಚಿತ್ರದುರ್ಗ	೨೩	೭೯
೪	ಕೋಲಾರ	೩೦	೬೮
೫	ಶಿವಮೊಗ್ಗ	೨೩	೮೧
೬	ತುಮಕೂರು	೨೮	೭೯
೭	ಬೆಳಗಾವಿ	೪೪	೩೯
೮	ಬಿಜಾಪುರ	೩೮	೩೭
೯	ಧಾರವಾಡ	೪೧	೫೯
೧೦	ಉತ್ತರ ಕನ್ನಡ	೨೬	೩೪
೧೧	ಬೀದರ್	೧೯	೨೪
೧೨	ಬಳ್ಳಾರಿ	೨೩	೪೫
೧೩	ಗುಲ್ಬರ್ಗಾ	೩೬	೪೬
೧೪	ರಾಯಚೂರು	೨೯	೩೫
೧೫	ಚಿಕ್ಕಮಗಳೂರು	೨೦	೫೭
೧೬	ದಕ್ಷಿಣ ಕನ್ನಡ	೩೮	೭೩
೧೭	ಹಾಸನ	೨೩	೭೮
೧೮	ಕೊಡಗು	೦೯	೧೪
೧೯	ಮೈಸೂರು	೪೦	೧೦೮
೨೦	ಮಂಡ್ಯ	೨೧	೬೫
	ಒಟ್ಟು	೫೪೫	೧೧೬೫